

ರಾಜಸ್ಥಾನದ ಮರಳುಗಾಡಿನಲ್ಲಿ ಪ್ರಕೃತಿ ಸೆರೆಹಿಡಿದ ಈ ಚಿತ್ರದ ಭಾವಭಿತ್ತಿಯಲ್ಲಿ ಛಾಯಾಗ್ರಾಹಕಿಯ ಹೆಜ್ಜೆಗುರುತೂ ಇದೆಯಲ್ಲವೇ?

# ಕ್ಯಾಮೆರಾ ಮೂಲಕ ಕಳಕಳಿಯ ಸಂದೇಶ

**ಪ್ರಕೃತಿ ಪಿ. ಕುಮಾರ್**
ವೈಲ್ಡ್‌ಲೈಫ್ ಫೋಟೊಗ್ರಾಫರ್

### ಸರಿಸುಮಾರು 1930

‘ಜನರು ಸಾಂಪ್ರದಾಯಿಕ ಮನೋಭಾವದವರು. ಹೆಣ್ಣೊಬ್ಬಳು ಹೊರಗಿನ ಜಾಗಗಳಲ್ಲೆಲ್ಲ ಅಲೆದಾಡುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸೀರೆ ಉಟ್ಟುಕೊಂಡು ಕೈಯಲ್ಲೊಂದು ಕ್ಯಾಮೆರಾ ಹಿಡಿದುಕೊಂಡು ಅಡ್ಡಾಡುವ ನನ್ನನ್ನು ಅವರು ವಿಚಿತ್ರವಾದದ್ದೇನೋ ನೋಡುವಂತೆ ನೋಡುತ್ತಿದ್ದವು. ಆರಂಭದ ದಿನಗಳಲ್ಲಿ, ಜಂಬ ತೋರಿಸಲೋ ಅಥವಾ ಇನ್ನ್ಯಾವುದೋ ಕಾರಣಕ್ಕೆ ನಾನು ಕ್ಯಾಮೆರಾ ಹಿಡಿದುಕೊಂಡು ವ್ಯರ್ಥವಾಗಿ ಅಲೆಯುತ್ತಿದ್ದೇನೆ ಎಂದೇ ಅವರು ಅಂದುಕೊಂಡಿದ್ದರು. ಹಾಗಾಗಿ ನನ್ನನ್ನು ಅವರು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ.’

### ಸೆಪ್ಟೆಂಬರ್ 2021

‘ಅವತ್ತು ಒಂದು ಮುಸ್ಲಿಂ ಕುಟುಂಬದ ಮದುವೆ ಮೆಹಂದಿ ಕಾರ್ಯಕ್ರಮವಿತ್ತು. ನಾನಾಗ ಎಂಟು ತಿಂಗಳ ಗರ್ಭಿಣಿ. ಆ ಕಾರ್ಯಕ್ರಮಕ್ಕೆ ಛಾಯಾಗ್ರಾಹಕಿಯಾಗಿ ಹೋಗಿದ್ದೆ. ನನ್ನಷ್ಟಕ್ಕೆ ನಾನು ಅವರ ಎಲ್ಲ ಸಂಪ್ರದಾಯಗಳು, ಸನ್ನಿವೇಶಗಳ ಫೋಟೊ ತೆಗೆಯುತ್ತಿದ್ದೆ. ಮೆಹಂದಿ ಹಚ್ಚುತ್ತ ಎಲ್ಲರೂ ಹಾಡು ಹೇಳುತ್ತ ಕುಣಿಯುತ್ತಿದ್ದರು. ನನಗೆ ಅರಿವಿಲ್ಲದ ಹಾಗೆ ಅಲ್ಲಿದ್ದ ಎಲ್ಲರೂ ನನ್ನನ್ನು ಸುತ್ತುವರಿದರು. ಹಾಗೆಯೇ ಹಾಡು ಹೇಳುತ್ತಲೇ ನನ್ನನ್ನು ಅಭಿನಂದಿಸುವ ಹಾಗೆ ಸುತ್ತಲೂ ಕುಣಿಯುತ್ತ ಸಂಭ್ರಮಿಸಿದರು. ಕ್ಯಾಮೆರಾ ಹಿಡಿದ ನಾನು ಅವತ್ತು ಅವರ ಕೇಂದ್ರದಲ್ಲಿದ್ದೆ. ಆ ಕ್ಷಣ ನನ್ನ ಬದುಕಿನಲ್ಲಿ ಎಂದಿಗೂ ಮರೆಯಲು ಸಾಧ್ಯವಿಲ್ಲ.’

—ಎರಡೂ ಹೇಳಿಕೆಗಳಲ್ಲಿಯೂ ಎರಡು ಬೇರೆ ಬೇರೆ ಗ್ರಹಗಳಿಗೆ ಸಂಬಂಧಿಸಿದ್ದು ಎನ್ನುವಷ್ಟು





ನಾನು ಬೆಂಗಳೂರಿನಲ್ಲಿಯೇ ಬೆಳೆದಿದ್ದು. ಟೆಲಿಕಮ್ಯುನಿಕೇಷನ್ ಇಂಜಿನಿಯರಿಂಗ್ ಪದವಿ ಪಡೆದು ನಂತರ ಮೂರು ವರ್ಷ ಕೆಲಸ ಮಾಡಿದೆ. ಈಗ ಅಮೆರಿಕದ ಡ್ಯೂಕ್ ಯುನಿವರ್ಸಿಟಿಯಲ್ಲಿ ಮಾಸ್ಟರ್ಸ್ ಮಾಡುತ್ತಿದ್ದೇನೆ.

ನಾನು ಫೋಟೊಗ್ರಫಿ ಶುರುಮಾಡಿದ್ದು ಎಂಟೋ ಒಂಬತ್ತನೇ ತರಗತಿಯಲ್ಲಿ. ನನ್ನ ತಂದೆ ಪ್ರವೀಣ್‌ಕುಮಾರ್ ಅವರೂ ಫೋಟೊಗ್ರಾಫರ್. ಹಾಗಾಗಿ ನಾನು ಅವರ ಜೊತೆಗೆ ಕಾಡುಗಳಿಗೆ, ಬೇರೆ ಬೇರೆ ಊರುಗಳಿಗೆ, ಬಂಡಿಪುರ, ನಾಗರಹೊಳೆಯಂಥ ಜಾಗಗಳಿಗೆ ಹೋಗ್ತಿದ್ದೆ. ಹಾಗೆ ನನಗೆ ಪ್ರಾಣಿ–ಪಕ್ಷಿಗಳ ಕುರಿತು ಕುತೂಹಲ ಶುರುವಾಯಿತು. ಒಮ್ಮೆ ನನ್ನ ತಂದೆಯ ಸ್ನೇಹಿತರ ಮನೆಯಲ್ಲಿ ಬರ್ಡ್‌ನೆಸ್ಟ್ ಇತ್ತು. ಅದರ ಫೋಟೊ ತೆಗೆಯಲು ಹೋದಾಗ ನಾನು ಮೊದಲು ಕ್ಯಾಮೆರಾ ಹಿಡಿದುಕೊಂಡು ಹೋಗಿದ್ದೆ. ನಾನೂ ಫೋಟೊ ತೆಗೆದೆ. ಆ ಫೋಟೊ ತೆಗೆದ ಪ್ರಕ್ರಿಯೆ ನನಗೆ ತುಂಬ ಖುಷಿ ಕೊಟ್ಟಿತು. ಅದರ ನಂತರ ನನ್ನ ತಂದೆ ಫೋಟೊಗ್ರಫಿಗೆ ಎಲ್ಲಿಗೇ ಹೋದರೂ ನಾನೂ ಅವರ ಜೊತೆಗೆ ಹೋಗ್ತಿದ್ದೆ. ಆಗ ತಂದೆ ಫೋಟೊ ಹೇಗೆ ತೆಗೀಬೇಕು, ಹೇಗೆ ಕಂಪೋಸ್ ಮಾಡ್ಬೇಕು ಅನ್ನುವುದನ್ನೆಲ್ಲ ಹೇಳಿಕೊಡುತ್ತಿದ್ದರು. ಈಗಲೂ ಅವರೇ ನನಗೆ ಮಾರ್ಗದರ್ಶಕರು.

ನಾನು ವೈಲ್ಡ್‌ಲೈಫ್ ಫೋಟೊಗ್ರಫಿಯನ್ನೇ ಯಾಕೆ ಆಯ್ದುಕೊಂಡೆ ಅನ್ನುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು, ಕಾಡಿನಲ್ಲಿ ನಡೆಯುವ ಡ್ರಾಮಾ ನನಗೆ ತುಂಬಾ ಇಷ್ಟ. ಹುಲಿ ಬೇಟೆ ಮಾಡುವುದು, ಆನೆಗಳು ಸಂವಾದ, ಕಾಡುನಾಯಿಗಳ ಚಟುವಟಿಕೆಗಳು ಇವನ್ನೆಲ್ಲ ಸೆರೆಹಿಡಿಯುವುದು ನನಗೆ ತುಂಬ